## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ 72 ರಡಿ ಕೋರಿರುವ ಪ್ರಶ್ನೆಗೆ ಉತ್ತರ.

**ಸೂಚನೆ:**

ಸಮಾಜ ಕಲ್ಯಾಣ ಇಲಾಖೆಯ ಚನ್ನಪಟ್ಟಣ್ಣ ತಾಲ್ಲೂಕಿನ ಚಕ್ಕರೆ ಗ್ರಾಮದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳ ನಡುವೆ ನಡೆದ ಗಲಾಟೆಯಲ್ಲಿ ತಮ್ಮ ಆರೋಗ್ಯವನ್ನು ಲೆಕ್ಕಿಸದೆ, ಕೆಲಸ ಮಾಡಿದ ಪ್ರಾಂಶುಪಾಲರಾದ ಶ್ರೀ ವಿ.ಬಿ.ಹನುಮಂತಯ್ಯ ರವರನ್ನು ಅಮಾನತ್ತುಗೊಳಿರುತ್ತಾರೆ. ಸದರಿ ವಿಷಯದ ಸಂಬಂಧ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಮಾನ್ಯ ಶಾಸಕರಾದ ಶ್ರೀ ಪುಟ್ಟಣ್ಣ. ಅವರು ಮಾತನಾಡಿದ ಮೇಲೆ ಶ್ರೀಮತಿ ಮಹಾಲಕ್ಷ್ಮೀ ನಿಲಯ ಪಾಲಕರು, ಶ್ರೀ ಜಗಧೀಶ್ ಎಸ್.ಆರ್. ಪ್ರಥಮ ದರ್ಜೆ ಸಹಾಯಕರು ಹಾಗೂ ಶ್ರೀಮತಿ ಜಾಹ್ನವಿ ಎನ್.ಆರ್. ಗಣಿತ ಶಿಕ್ಷಕರನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಇದೇ ಕಾರಣದಿಂದಾಗ ಮಾನ್ಯ ಶಾಸಕರನ್ನು ದಿನಾಂಕ:19.06.2024ರಂದು ನಡೆದ ಸಮಾಜ ಕಲ್ಯಾಣ ಇಲಾಖೆಯ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಾಗೂ ದಿನಾಂಕ:13.07.2024ರಂದು ನಡೆದ ಬಾಬು ಜಗಜೀವನರಾಮ್ ಭವನದ ಉದ್ಘಾಟನೆ ಕಾರ್ಯಕ್ರಮಗಳಿಗೆ ಸಹ ಆಹ್ವಾನಿಸಿರುವುದಿಲ್ಲದಿರುವ ಬಗ್ಗೆ ಹಾಗೂ ವೈಯಕ್ತಿಕ ದ್ವೇಷದಿಂದ ಕೆಲಸದಿಂದ ತೆಗೆದಿರುವ ಸಿಬ್ಬಂದಿಗಳಿಗೆ ಅನ್ಯಾಯವಾಗಿರುವ ಬಗ್ಗೆ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮವಹಿಸುವ ವಿಚಾರವನ್ನು ಮಾನ್ಯ ಸದಸ್ಯರು ಈ ಅಧಿವೇಶನದಲ್ಲಿ ಪ್ರಸ್ತಾಪಿಸಲಿದ್ದಾರೆ.

**ಉತ್ತರ:**

ಮೊರಾರ್ಜಿ ದೇಸಾಯಿ ವಸತಿ ಶಾಲೆ(ಪ.ಜಾತಿ-8), ಚಕ್ಕರೆ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ, ದಿನಾಂಕ:12.09.2023 ರಂದು ರಾತ್ರಿ 9:30 ರ ಸಮಯದಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ, ಕು||ರಾಹುಲ್ ರಘು ಬಿನ್ ರಘು.ವಿ ಎಂಬುವವರು ವಸತಿ ಶಾಲೆಯಲ್ಲಿ ಊಟ ಮಾಡಿಕೊಂಡು ತನ್ನ ರೂಮಿಗೆ ಹೋಗಿ ತಟ್ಟೆ ಲೋಟವನ್ನು ಇಟ್ಟು ನಂತರ ಆಟವನ್ನು ಆಡಲು ಹೋದಾಗ ದಾರಿಯಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ 15 ವರ್ಷದ 10ನೇ ತರಗತಿಯ ಪುನೀತ್ ಎಂಬ ವಿದ್ಯಾರ್ಥಿಯು ದಾರಿಯಲ್ಲಿ ಕಾಲನ್ನು ನೀಡಿ ಯಾರಾದರೂ ನನ್ನ ಕಾಲನ್ನು ಟಚ್ ಮಾಡಿದರೆ ಸುಮ್ಮನೇ ಬಿಡುವುದಿಲ್ಲ ಎಂದು ಹೇಳುತ್ತಿದ್ದನು, ಆಗ ರಾಹುಲ್ ರಘು ಆಟವಾಡುತ್ತಿದ್ದಾಗ ಬಾಲ್ ಪುನೀತ್‌ನ ಕಾಲಿಗೆ ಹೋಗಿ ಟಚ್ ಆಯಿತು ಆಗ ಪುನಿತನು ಮೊದಲೇ ಹೇಳಿರಲಿಲ್ಲವೇ ಯಾರು ಟಚ್ ಮಾಡಬೇಡಿ ಎಂದು ಹೇಳಿ ಬಾಲನ್ನು ರಾಹುಲನು ಎತ್ತಿಕೊಳ್ಳಲು ಹೋದಾಗ ಏಕಾ ಏಕಿ ಪುನಿತ್ ಅಲ್ಲೇ ಇದ್ದ ಸೊಳ್ಳೆ ಪರದೆ ಕಟ್ಟಲು ಇಟ್ಟಿದ್ದ ರಾಡನ್ನು ಎತ್ತಿಕೊಂಡು ರಾಹುಲ್ ತಲೆಗೆ ಹೊಡೆದು ಗಾಯಗೊಳಿಸಿರುತ್ತಾನೆ.

ಈ ಸಂದರ್ಭದಲ್ಲಿ ಕು||ರಾಹುಲ್ ರಘು ಪ್ರಜ್ಞೆ ತಪ್ಪಿದ್ದಾಗಿ ಹಾಗೂ ಪ್ರಜ್ಞೆ ಬಂದಾಗ ಆಸ್ಪತ್ರೆಯಲ್ಲಿ ಇದಿದ್ದಾಗಿ ಆ ಸಂದರ್ಭದಲ್ಲಿ, ಕಾಟ್ ಮೇಲಿಂದ ಬಿದ್ದು ಗಾಯವಾಗಿರುವುದಾಗಿ ಹೇಳು ಎಂದು ಪ್ರಾಂಶುಪಾಲರಾದ ಶ್ರೀ ಹನುಮಂತಯ್ಯ ತಿಳಿಸಿದಾಗ್ಯೂ ಹಾಗೂ ಈ ವಿಷಯದ ಕುರಿತು ಶ್ರೀ ಜಗದೀಶ್, ಎಫ್.ಡಿ.ಎ(ಹೊರ ಸಂಪನ್ಮೂಲ) ರವರು ಕಾಟ್ ನಿಂದ ಬಿದ್ದೆ ಅಂತ ಹೇಳು, ವಾಸ್ತವ ನಡೆದ ವಿಚಾರವನ್ನು ಹೇಳಿದರೆ ನಿನ್ನನ್ನು ಬಿಡುವುದಿಲ್ಲ ಎಂದು ಕು||ರಾಹುಲ್ ರಘುನನ್ನು ಹೆದರಿಸಿರುವುದಾಗಿ ಎಫ್.ಐ.ಆರ್ ನಲ್ಲಿ ದಾಖಲಾಗಿರುತ್ತದೆ.

ಸದರಿ ಘಟನೆಯ ಕುರಿತು, ಪ್ರಾಂಶುಪಾಲರಾದ ಶ್ರೀ ಹನುಮಂತಯ್ಯ(A-1) ಮತ್ತು ಶ್ರೀ ಜಗದೀಶ್ (A-2) ಹಾಗೂ ಕು||ಪುನಿತ್ (ಜ್ಯೂವಿಲಿಯನ್-1) ಇವರ ವಿರುದ್ಧ ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ:0250/2023 ಕಾಯ್ದೆ ಮತ್ತು ಕಲಂಗಳು:JUVENILE JUSTICE ACT,2000(U/s-23), IPC1860(U/s-506, 34, 324) ರಡಿಯಲ್ಲಿ ದಿನಾಂಕ:17.09.2023 ರಂದು ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ದಿನಾಂಕ:13.09.2023 ರಂದು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಹಾಯಕ ನಿರ್ದೇಶಕರು(ಆಡಳಿತ) ಇವರು ವಸತಿ ಶಾಲೆಗೆ ಖುದ್ದು ಭೇಟಿ ನೀಡಿ ವರದಿಯನ್ನು ಸಲ್ಲಿಸಿರುತ್ತಾರೆ. ವರದಿಯ ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ದಿನಾಂಕ:19.09.2023 ರಂದು ಸದರಿ ಘಟನೆಯ ಕುರಿತು ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ರಾಮನಗರ ಜಿಲ್ಲೆ ಇವರು ವರದಿಯನ್ನು ಸಲ್ಲಿಸಿರುತ್ತಾರೆ. ವರದಿಯ ಮಾಹಿತಿಯನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.

ಈ ಘಟನೆಯು ಪ್ರಾಂಶುಪಾಲರ ಹಾಗೂ ನಿಲಯಪಾಲಕರ ಬೇಜವಾಬ್ದಾರಿತನದಿಂದ ಸಂಭವಿಸಿದ ಹಿನ್ನಲೆಯಲ್ಲಿ ದಿನಾಂಕ: 26.09.2023 ರಂದು ಶ್ರೀ ಹನುಮಂತಯ್ಯ ಪ್ರಾಂಶುಪಾಲರು ಹಾಗೂ ಶ್ರೀ ಮಹಾಲಕ್ಷ್ಮಿ, ಕಂಪ್ಯೂಟರ್ ಶಿಕ್ಷಕರು ಹಾಗೂ ಪ್ರಭಾರ ನಿಲಯಪಾಲಕರು ಇವರ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತ್ತು ಮಾಡಲಾಗಿರುತ್ತದೆ. ಮಾಹಿತಿಯನ್ನು ಅನುಬಂಧ-4 ರಲ್ಲಿ ನೀಡಲಾಗಿದೆ.

ಸದರಿ ಘಟನೆಯನ್ನು ಮುಚ್ಚಿ ಹಾಕಲು ಪ್ರಯತ್ನಿಸಿದ ಶ್ರೀ ಜಗದೀಶ್ ಇವರನ್ನು ಹೊರ ಸಂಪನ್ಮೂಲ ಏಜೆನ್ಸಿಗೆ ಹಿಂದಿರುಗಿಸಲು ದಿನಾಂಕ:26.09.2023 ರಂದು ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ರಾಮನಗರ ಜಿಲ್ಲೆ ಇವರಿಗೆ ಪತ್ರ ಬರೆಯಲಾಗಿರುತ್ತದೆ. ಮಾಹಿತಿಯನ್ನು ಅನುಬಂಧ-5 ರಲ್ಲಿ ನೀಡಲಾಗಿದೆ.

ಸರ್ಕಾರದ ದಿನಾಂಕ:17.10.2023 ರ ಪತ್ರದಲ್ಲಿ ಶ್ರೀಮತಿ ಜಾಹ್ನವಿ ಎಂ.ಆರ್, ಗಣಿತ ಅಥಿತಿ ಶಿಕ್ಷಕರು ಇವರು ಪ್ರಾಂಶುಪಾಲರಾದ ಶ್ರೀ ಹನುಮಂತಯ್ಯ ಇವರ ಪತ್ನಿ ಆಗಿದ್ದು, ಸದರಿ ಪ್ರಾಂಶುಪಾಲರು ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ನು ಉಲ್ಲಂಘಿಸಿ ತಮ್ಮ ಪತ್ನಿಯವರನ್ನುಅದೇ ಶಾಲೆಯಲ್ಲಿ ಅತಿಥಿ ಗಣಿತ ಶಿಕ್ಷಕರನ್ನಾಗಿ ನೇಮಕ ಮಾಡಿಕೊಂಡಿರುತ್ತಾರೆ. ಆದ್ದರಿಂದ ಅವರನ್ನು ಕೂಡಲೇ ಬಿಡುಗಡೆಗೊಳಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸೂಚಿಸಲಾಗಿರುತ್ತದೆ. ಮಾಹಿತಿಯನ್ನು ಅನುಬಂಧ-6 ನೀಡಲಾಗಿದೆ.

ಶ್ರೀಮತಿ ಜಾಹ್ನವಿ ಎಂ.ಆರ್, ಗಣಿತ ಅಥಿತಿ ಶಿಕ್ಷಕರು, ಇವರು ಪ್ರಾಂಶುಪಾಲರಾದ ಶ್ರೀ ಹನುಮಂತಯ್ಯ ಇವರ ಪತ್ನಿ ಆಗಿದ್ದು, ಸದರಿ ಪ್ರಾಂಶುಪಾಲರು ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ನು ಉಲ್ಲಂಘಿಸಿ ತಮ್ಮ ಪತ್ನಿಯವರನ್ನುಅದೇ ಶಾಲೆಯಲ್ಲಿ ಅತಿಥಿ ಗಣಿತ ಶಿಕ್ಷಕರನ್ನಾಗಿ ನೇಮಕ ಮಾಡಿಕೊಂಡಿರುತ್ತಾರೆ. ಈ ಹಿನ್ನಲೆಯಲ್ಲಿ ಅವರನ್ನು ಕೂಡಲೇ ಬಿಡುಗಡೆಗೊಳಿಸಲು ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ರಾಮನಗರ ಜಿಲ್ಲೆ ಇವರಿಗೆ ದಿನಾಂಕ:20.10.2023 ರಂದು ಪತ್ರ ಬರೆಯಲಾಗಿರುತ್ತದೆ. ಮಾಹಿತಿಯನ್ನು ಅನುಬಂಧ-7 ರಲ್ಲಿ ನೀಡಲಾಗಿದೆ.

ಶ್ರೀ ಹನುಮಂತಯ್ಯ, ಪ್ರಾಂಶುಪಾಲರು ಹಾಗೂ ಶ್ರೀ ಮಹಾಲಕ್ಷ್ಮಿ, ಕಂಪ್ಯೂಟರ್ ಶಿಕ್ಷಕರು ಹಾಗೂ ಪ್ರಭಾರ ನಿಲಯಪಾಲಕರು ಇವರ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ ದಿನಾಂಕ:14.12.2023 ರಂದು ಅಮಾನತ್ತು ಆದೇಶವನ್ನು ತೆರವುಗೊಳಿಸಿ ಶ್ರೀ ಹನುಮಂತಯ್ಯ ಇವರನ್ನು ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹೆಚ್.ಗೊಲ್ಲಹಳ್ಳಿ, ರಾಮನಗರ ತಾಲ್ಲೂಕು & ಜಿಲ್ಲೆ ಹಾಗೂ ಶ್ರೀ ಮಹಾಲಕ್ಷ್ಮಿ ಇವರನ್ನು ಮೊರಾರ್ಜಿ ದೇಸಾಯಿ ವಸತಿ ಶಾಲೆ. ಕೆಂಪೇಗೌಡ ಸರ್ಕಲ್, ರಾಮನಗರ ತಾಲ್ಲೂಕು & ಜಿಲ್ಲೆ ಇಲ್ಲಿಗೆ ತೈನಾತಿಸಿ ಆದೇಶಿಸಲಾಗಿರುತ್ತದೆ. ಮಾಹಿತಿಯನ್ನು ಅನುಬಂಧ-8 ರಲ್ಲಿ ನೀಡಲಾಗಿದೆ.

ಶ್ರೀ ಹನುಮಂತಯ್ಯ, ಪ್ರಾಂಶುಪಾಲರು ಹಾಗೂ ಶ್ರೀ ಮಹಾಲಕ್ಷ್ಮಿ, ಕಂಪ್ಯೂಟರ್ ಶಿಕ್ಷಕರು ಹಾಗೂ ಪ್ರಭಾರ ನಿಲಯಪಾಲಕರು ಇವರ ವಿರುದ್ಧದ ಆಪಾದನೆಗಳ ಬಗ್ಗೆ ಇಲಾಖಾ ವಿಚಾರಣೆಯನ್ನು ನಡೆಸಲು ಶ್ರೀ ಜಿ.ಎಸ್. ಸೋಮಶೇಖರ್ ನಿವೃತ್ತ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಶ್ರೀ ಹೊನ್ನರಾಜು, ಸಹಾಯಕ ನಿರ್ದೇಶಕರು(ಶಿಕ್ಷಣ), ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಬೆಂಗಳೂರು ಇವರನ್ನು ಮಂಡನಾಧಿಕಾರಿಯಾಗಿ ದಿನಾಂಕ:05.06.2024 ರಂದು ನೇಮಕ ಮಾಡಿ ಆದೇಶಿಸಲಾಗಿದೆ ಹಾಗೂ ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ ಮಾಹಿತಿಯನ್ನು ಅನುಬಂಧ-9 ರಲ್ಲಿ ನೀಡಲಾಗಿದೆ.

ಸಕಇ 204 ಎಂಡಿಎಸ್ 2024

(ಡಾ. ಹೆಚ್.ಸಿ ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು.